# ಕರ್ನಾಟಕ ಸರ್ಕಾರ

## ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆಯ ನೃಪತುಂಗ ರಸ್ತೆ, ಬೆಂಗಳೂರು-1

ಸಂಖ್ಯೆ: ಸಿ4(6) ಪ್ರೌಶಾಶಿ.ಇತರೆ/01/16-17 ದಿನಾಂಕ: 06.03.2017

ರವರಿಗೆ

**ರಾಜ್ಯದ ಎಲ್ಲಾ ಖಾಸಗಿ ಅನುದಾನಿತ ಹಾಗೂ ಅನುದಾನ ರಹಿತ**
**ಪ್ರಾಂಶುಪಾಲರು / ಮುಖ್ಯೋಪಾಧ್ಯಾಯರುಗಳಿಗೆ**

**ವಿಷಯ:** ದಡಾರ-ರುಬೆಲ್ಲಾ ಅಭಿಯಾನ ಪೂರ್ಣ ಪ್ರಮಾಣದ ಪ್ರಗತಿಯನ್ನು ಸಾಧಿಸುವ ಕುರಿತು.

***********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ದಡಾರ-ರುಬೆಲ್ಲಾ ಅಭಿಯಾನದಲ್ಲಿ ಕರ್ನಾಟಕದಲ್ಲಿ 1.45ಕೋಟಿ ಮಕ್ಕಳಿಗೆ ಲಸಿಕೆ ನೀಡಲಾಗಿದೆ. ಈ ಅಭಿಯಾನಕ್ಕೆ ಬೆಂಬಲ ನೀಡಿದ ತಮಗೆಲ್ಲರಿಗೂ ಹೃತ್ಪೂರ್ವಕ ಅಭಿನಂದನೆಗಳು.

ಸದರಿ ಅಭಿಯಾನದಲ್ಲಿ ಬಿಟ್ಟು ಹೋಗಿರುವ ಮಕ್ಕಳಿಗೆ ಲಸಿಕೆ ದೊರಕುವ ಉದ್ದೇಶದಿಂದ ಅಭಿಯಾನವನ್ನು ದಿನಾಂಕ:08.03.2017 ರ ವರೆಗೆ ವಿಸ್ತರಿಸಲಾಗಿದೆ, ಹಾಗೂ ಎಲ್ಲಾ ಸರ್ಕಾರಿ ಆರೋಗ್ಯ ಸಂಸ್ಥೆಗಳಲ್ಲಿ ಮಾರ್ಚ್ 15ರವರೆಗೆ ಎಂಆರ್ ಲಸಿಕೆಯು ಲಭ್ಯವಿರುತ್ತದೆ. ತಾವುಗಳು ಈ ಅಭಿಯಾನಕ್ಕೆ ತಮ್ಮ ಶಾಲೆಗಳಲ್ಲಿ ಲಸಿಕೆ ಬಿಟ್ಟು ಹೋಗಿರುವ ಎಲ್ಲಾ 15 ವರ್ಷದೊಳಗಿನ ಮಕ್ಕಳನ್ನು ಗುರುತಿಸಿ ಅವರಿಗೆ ಸಮೀಪದ ಆರೋಗ್ಯ ಸಂಸ್ಥೆಯಿಂದ ಲಸಿಕೆ ದೊರೆಯುವಂತೆಕ್ರಮ ವಹಿಸಿ, 100 % ಪ್ರಗತಿ ಸಾಧಿಸಲು ಸಹಕರಿಸುವಂತೆ ಈ ಮೂಲಕ ತಮ್ಮಲ್ಲಿ ಕೋರಿದೆ.

1. ಎಂಆರ್ ಲಸಿಕೆ ಬಿಟ್ಟುಹೋಗಿರುವ ಎಲ್ಲಾ ಮಕ್ಕಳ ಪೋಷಕರ ಮನವೊಲಿಸಿ ಹತ್ತಿರದ ಆರೋಗ್ಯ ಸಂಸ್ಥೆಯಲ್ಲಿ ಮಾರ್ಚ್ 8 ರೊಳಗೆ ಲಸಿಕೆ ಹಾಕಿಸುವಂತೆ ಕ್ರಮವಹಿಸುವುದು.
2. ತಮ್ಮ ಶಾಲೆಯಲ್ಲಿ ಎಲ್ಲಾ ಮಕ್ಕಳು ಎಂಆರ್ ಲಸಿಕೆ ಪಡೆದಿರುವ ಬಗ್ಗೆ ಲಸಿಕಾ ಕಾರ್ಡ್‌ಅನ್ನು ಖುದ್ದಾಗಿ ಪರಿಶೀಲಿಸಿ ದಾಖಲಿಸುವುದು. ಈ ಎಲ್ಲಾ ದಾಖಲೆಗಳನ್ನು ಶಿಕ್ಷಣ ಇಲಾಖೆ ಅಥವಾ ಆರೋಗ್ಯ ಇಲಾಖೆಯವರ ಪರಿಶೀಲನೆಗೆ ಒದಗಿಸುವುದು(ಯಾವುದೇ ಮಗುವು ವೈದ್ಯಕೀಯ ಕಾರಣಗಳಿಂದ ಲಸಿಕೆ ಪಡೆಯದಿದ್ದಲ್ಲಿ ಅದನ್ನು ನಮೂದಿಸುವುದು).

**ತಮ್ಮ ಶಾಲೆಯಲ್ಲಿ ಎಲ್ಲಾ 15 ವರ್ಷದೊಳಗಿನ ಮಕ್ಕಳು 7ನೇ ಫೆಬ್ರುವರಿ ಯಿಂದ 8ನೇ ಮಾರ್ಚ್‌ವರೆಗೆ ಶಾಲೆಯಲ್ಲಿ, ಸರ್ಕಾರಿ ಆಸ್ಪತ್ರೆಯಲ್ಲಿ ಅಥವಾ ಖಾಸಗಿ ಆಸ್ಪತ್ರೆಯಲಿ ಒಂದು ಎಂಆರ್ ಪಡೆದಿರುವಂತೆ ಕ್ರಮವಹಿಸುವುದು. ದಿನಾಂಕ:07.02.2017ರಿಂದ 15.03.2017ರ ಅಭಿಯಾನದ ಅವಧಿಯಲ್ಲಿ ಯಾವುದಾದರು ಮಗುವು ಎಂಎಂಆರ್ ಲಸಿಕೆ ಪಡೆದಿದ್ದಲ್ಲಿ ಅದನ್ನು ಸಹ ದಾಖಲಿಸುವುದು.**

ಈ ಅಭಿಯಾನದಲ್ಲಿ ತಮ್ಮ ಶಾಲೆ ಹಾಗೂ ಶಿಕ್ಷಕರ ಪಾತ್ರ ಅತ್ಯಂತ ಶ್ಲಾಘನೀಯ ಎಂದು ಭಾರತ ಸರ್ಕಾರ, ವಿಶ್ವ ಆರೋಗ್ಯ ಸಂಸ್ಥೆ, ಯುನಿಸೆಫ್, ಲಯನ್ಸ್ ಇಂಟರ್‌ನ್ಯಾಷನಲ್ ರವರು ತಿಳಿಸಿರುತ್ತಾರೆ.

(ಆಯುಕ್ತರು)
ಸಾರ್ವಜನಿಕ ಶಿಕ್ಷಣ ಇಲಾಖೆ

ಪ್ರತಿಯನ್ನು,

1. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ)ರವರಿಗೆ ಅಗತ್ಯ ಕ್ರಮಕ್ಕಾಗಿ.
2. ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ರವರಿಗೆ ಕಳುಹಿಸುತ್ತಾ, ತಮ್ಮ ವ್ಯಾಪ್ತಿಗೆ ಒಳಪಡುವ ಎಲ್ಲಾ ಖಾಸಗಿ ಅನುದಾನಿತ/ ಅನುದಾನ ರಹಿತ ಶಾಲೆಗಳಿಗೆ ರವಾನಿಸಿ ಸೂಕ್ತ ಕ್ರಮವಹಿಸುವಂತೆ ತಿಳಿಸಿದೆ.
3. .ಕಛೇರಿ ಪ್ರತಿ.